ಅಧ್ಯಕ್ಷರು : ನೀವು ಬೇಡ ಎಂದು ಹೇಳುತ್ತೀರಿ.

ಶ್ರೀ ಎನ್.ಎ.ಹ್ಯಾರಿಸ್ : ಈಗ ಉತ್ತರ ನನ್ನ ಕೈಗೆ ಕೊಟ್ಟಿದ್ದಾರೆ, ಓದಿ ಬಿಟ್ಟು ನಾನು ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಈಗ ಕೇಳುತ್ತೀರಾ ?

ಶ್ರೀ ಎನ್.ಎ. ಹ್ಯಾರಿಸ್ : ಈಗ ಅವರು ಉತ್ತರ ಕೊಟ್ಟಿದ್ದಾರೆ. ನನಗೆ ಸ್ವಲ್ಪ ಸಮಯ ಕೊಡಿ.

ಅಧ್ಯಕ್ಷರು : ನೀವು ಈಗ ಕೇಳುತ್ತೀರಾ?

ಶ್ರೀ ಎನ್.ಎ. ಹ್ಯಾರಿಸ್ : ಅವರದಾದ ಮೇಲೆ ನಾನು ಕೇಳುತ್ತೇನೆ. ಅವರದ್ದು ಮುಗಿಸಿ ಬಿಡಿ ಸರ್. Please Sir.

ಶ್ರೀ ಸಿದ್ದರಾಮಯ್ಯ : ಅವರು ಓದಿಕೊಳ್ಳಬೇಕಂತೆ, ಹೋಗಲಿ ಬಿಡಿ. ಮುನಿರಾಜುರವರದ್ದು ಕರೆದುಬಿಡಿ.

ಅಧ್ಯಕ್ಷರು : ಮುನಿರಾಜುರವರೇ, ನೀವು ಪ್ರಶ್ನೆ ಕೇಳಿ.

ರಾಜ ಕಾಲುವೆಗಳು

20 (428) ಮುನಿರಾಜು ಎಸ್. (ದಾಸರಹಳ್ಳಿ) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ವಾರ್ಡ್‌ವಾರು ಇರುವ ರಾಜಕಾಲುವೆಗಳು ಯಾವುವು ಮತ್ತು ಅವುಗಳ ಉದ್ದವೆಷ್ಟು;

(ಆ) ಈ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಅಭಿವೃದ್ಧಿಪಡಿಸಬೇಕಾದ ರಾಜಕಾಲುವೆಗಳು ಯಾವುವು; ಅವುಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕಾಲ ನಿಗಧಿಗೊಳಿಸಲಾಗಿದೆಯೇ;

(ಈ) ದಾಸರಹಳ್ಳಿ ಕ್ಷೇತ್ರದಲ್ಲಿ ಎಷ್ಟು ರಾಜಕಾಲುವೆಗಳು ಒತ್ತುವರಿಯಾಗಿವೆ; ಹಾಗಿದ್ದಲ್ಲಿ, ಅವುಗಳು ಯಾವುವು; ಈ ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) :–

(ಅ) ಕ್ಷೇತ್ರದ ವಾರ್ಡ್‌ವಾರು ಇರುವ ರಾಜಕಾಲುವೆಗಳ ವಿವರವನ್ನು **ಅನುಬಂಧ–1** ರಲ್ಲಿ ಒದಗಿಸಲಾಗಿದೆ. ಎಲ್ಲಾ ರಾಜಕಾಲುವೆಗಳ ಉದ್ದ ಒಟ್ಟು 41,65 ಕಿ.ಮೀ. ಆಗಿರುತ್ತದೆ.

(ಆ) ದಾಸರಹಳ್ಳಿ ವಿಧಾನ ಸಭಾ ವ್ಯಾಪ್ತಿಯಲ್ಲಿನ ರಾಜಕಾಲುವೆಗಳನ್ನು ನರ್ಮ್ ಯೋಜನೆಯಡಿ ಒಟ್ಟು ರೂ. 26,247,655 ಲಕ್ಷಗಳ ಮೊತ್ತದಲ್ಲಿ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಟೆಂಡರ್ ಕರೆಯಲಾಗಿದೆ.

(ಇ) **ಅನುಬಂಧ–1** ರಲ್ಲಿರುವ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಲು ಟೆಂಡರ್ ಕರೆಯಲಾಗಿದ್ದು, 2 ವರ್ಷಗಳ ಕಾಲಾವಧಿಯನ್ನು ನಿಗಧಿಪಡಿಸಲಾಗಿರುತ್ತದೆ.

(ಈ) ದಾಸರಹಳ್ಳಿ ವಿಧಾನಸಭಾ ವ್ಯಾಪ್ತಿಯಲ್ಲಿ ರಾಜಕಾಲುವೆಗಳ ಒತ್ತುವರಿ ಗುರುತಿಸುವ ಕಾರ್ಯವನ್ನು ಪಾಲಿಕೆಯು ಕಂದಾಯ ಇಲಾಖೆಯ ಸರ್ವೆಯರ್‌ಗಳ ಸಹಯೋಗದೊಂದಿಗೆ ಕೈಗೆತ್ತಿಕೊಳ್ಳಲಾಗಿದ್ದು, ಈ ಕಾರ್ಯ ಪ್ರಗತಿಯಲ್ಲಿರುತ್ತದೆ.

ಈಗಾಗಲೇ ಒತ್ತುವರಿ ಗುರುತಿಸಿರುವ ಜಾಗಗಳಲ್ಲಿ ಹಂತಹಂತವಾಗಿ ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. (ವಿವರಗಳನ್ನು **ಅನುಬಂಧ–2** ರಲ್ಲಿ ನೀಡಿದೆ) ಸರ್ವೆ ಇಲಾಖೆಯಿಂದ ಪೂರ್ಣ ಪ್ರಮಾಣದ ವರದಿ ದೊರೆತ ನಂತರ ಬಾಕಿ ಉಳಿದ ಒತ್ತುವರಿ ತೆರವುಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಅಬ್ಸ್ಟ್ರಾಕ್ಟ್ ವಿವರ ದಾಸರಹಳ್ಳಿ ವಿಧಾನಸಭಾ ಮತಕ್ಷೇತ್ರ ಪ್ರಸ್ತಾವಿತ ದಾಸರಹಳ್ಳಿ ವಲಯ-1 ಡಿಪಿಆರ್ ಅನುಬಂಧ-1

32

Abstract Details in Dasarahalli MLA Contituency under proposed Dasarahalli Zone-I DPR

Shettihalli Ward No -12

Sl. No	Drain No.	Drain Location		Length (In Meters)	Cost Inc. Structures
		From	To		
1	DH-125	Abbigere Tank Waste Weir-2	DH-124-126	760.00	425.27
2	DH-124	Abbigere Tank Waste Weir-1	Joins DH-125near Guddadahalli	1075.00	664 11
3.	DH-126	Starts From Ch @ 1075m of DH125	ChikkaBanavara Tank	1100 00	691.46
4	DH-131	A.E.S	Kamagondanahalli	2015.00	1348.90
5	DH-134	JarekabandeKaval State Forest	Kamagondanahalli Tank	420.00	323.33
6	DH-136	JarakabandeKaval State Forest	Joins to DH 135 @CH 690m	720 00	389.05
7	DH-135	Kamagondanahalli Tank waste weir	Joins to the start point DH137	675.00	565.36
8	DH-141	Vishveshapura Law	vrishabavathy valley point	1025.00	606.83
9	DH-143	Chikkasandra	Joins to DH 144 @ CH 1900m	1700 00	1214.77
10	DH-142	Mallasandra Tank	Shettahalli Tank	550.00	310.58
11	DH-143A	Shettahalli Tank	Joins to DH 143 @ CH 875m	933:00	674.11
12	DH-137	Starts at end point of DH-135	Joins to DH 144 and end point of DH-143@CH 1900m	1225 00	1022 47
13	DH-144	DH-137 @CH 1900	ChikkabanavaraKere	630.00	840 53
				12828.00	8402.67
Mallasandra Ward No -13					
1	DH-142A	MallasandraGutte	Shettahalli Tank	400.00	231 76
2	DH-214 (P)	BHEL mini colony 3rd main road	Joins to the starting point of DH-215	482.67	319.17
				882.67	550.93
Bagalagente Ward No -14					
1	DH-233	BHEL Mini Colony to End point DH232	End point of DH-232 starting point of DH234 at Bagalgunte	1325.00	768 84
2	DH-233A	Widia Factory	Joins to DH233 at Ch945.00m	390.00	207.5
3	DH-231	B B M P office Baglugunte	Baglugunte Tank	842.00	568.45
4	DH-232-34	Bagalagunte Tank	End of DH-235	2525.00	1801 56
5	DH-235	Siddeshwara layout 1st block	joins to DH 234 at CH 1050 m (Sharadavidyalaya	1375.00	753.56
6	DH-236	Thotadhagudadhalli 2nd cross	joins to DH234 at Ch.1075m	518.00	219.29
				6975.00	4319.28

Sl. No	Drain No	Drain Location		Length (in Meters)	Cost Inc. Structures
		From	To		
		T.Dasarahalli Ward No -15			
1	DH-212	Hesaragatta Pipe line Road	Dasarahalli Tank	1275.00	786.95
2	DH-214(P)	Suvaneswarinagara, NH-4 Crossing	Joins to the starting point of DH-215	482.67	319.17
				1757.67	1106.12
		Chokkasadra Ward No -39			
1	DH-211 (P)	Near Bharatn	Joins To Dasaahalli tank	1087.50	752.49
2	DH-211B	Kirloskar Factory(Ace Designers)	Joins to DH 211 @ CH 2175m	600 00	355 44
3	DH-214 (P)	Suvaneswarinagara, NH-4 Crossing	Joins to the starting point of DH-215	482.67	319.17
4	DH-215	Peenyaindustrial area	Connected at end point of DH-215	1916.00	1103.63
5	DH-213	Dasarahalli Tank	Starting point DH-215 at Rukmininagar	1770.00	1650.25
6	DH-217A	Nagasandra	Join DH-213-215-217	1275.00	768.31
7	DH 217B	Ganga International School	Join DH-213-215-217	515.00	257 30
				7646.17	5206.59
		Panya Industrial Area Ward No -41			
1	DH-113 (P)	Rajgopalnagar	vnshabavathy valley	950.00	206 81
2	DH-311	Chamundi Nagar	ShivapuraKere	1125.00	637.08
3	DH-311A	Seven Hills Pvt. Ltd Near TVS Cross	Joins DH-311 at CH-675 at parvatinagar	425.00	212.35
4	DH-312B	Nallakadirenahal	Nallakadirenahali Tank	236.00	126 76
5	DH-313A	Nallakadirenahali Tank	Joins DH-313	725.00	344.71
6	DH-313	NallakadirenahaliMain Road	Karvibonahalli Tank	485.00	239 60
7	DH-312	Shivapura Tank	Karvibonahalli Tank	695.00	558.56
8	DH-312A	Nallakadirenahal	Nallakadirenahali Tank	296.00	173 42
9	DH-314	GovtUnani College near Sunkadakatte	Joins DH-315-316	1102.00	566.18
10	DH-314A	Venkateshwara Nagar	Joins DH-314	750.00	392.54
11	DH-315	K.T.G Hospital, Srinivanagar	Joins at end point of DH 314 at Hegganahalli	1140 00	291 43
12	DH-316	end point of DH-314 at Hegganahalli	Karvibonahalli Tank	180.00	89.31
				8112.00	4838.75

Sl. No	Drain No.	Drain Location		Length (in Meters)	Cost Inc. Structures
		From	To		
Rajagopal Nagar Ward No -70					
1	OH-141	Vishveshapura Law	vishabavathy valley point	1025.00	666.83
2	OH-111A	Rajagopal Nagar main road	Basappanakatte	567.00	212.66
				1592.00	819.49
Heggannahalli Ward No -74					
1	OH-331(P)	Byraveshwara Industrial Estate, Handrahalli Main Road	Handrahalli Tank	1087.50	651.86
2	OH-370(P)	Mahadeshwaranagar	Herohalli tank	772.50	351.88
				1860.00	1003.73
GRAND TOTAL				41653.50	26247.55

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

BRUHATH BANGALORE MAHANAGARA PALIKE

List of Enchroachment identified and removed in Word No. 41, Peenya Industrial Area, 4th phase, Dasarahalli zone (SWD) (DH 311, Ganapathinagar to Shivapura Kere Via Peenya Industrial Area)

SL. NO	PLOT NUMBER	AREA OF ENCROACHMENT IN SQ MT
1	286	10.22
2	292&294	87.74
3	310&311	4.5
4	312	78.82
5	313	11.12
6	314	39.23
7	316	6.63
8	317	19.08
9	318	23.94
10	318A	93.79
11	319	56.36
12	321	6.18
13	323	64.92
14	324	8.79
15	326P1&P2	48.6
16	326P	70.04
17	326 TO 328	352.1
18	329 & 330	94.95
19	331	2.96
20	332	71.15
21	333	19.58
22	336	21.64
23	340B	265.21
24	341	175.34
25	375A	79.17
26	376A	24.8
27	460B	784.28
28	460C	22.5
29	460E	49.03
	Total	2592.67

ಶ್ರೀ ಎಸ್. ಮುನಿರಾಜು : ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಈಗ ತಾನೇ ಒದಗಿಸಿದ್ದಾರೆ. ಬೆಂಗಳೂರು ಮಹಾನಗರದಲ್ಲಿ ಅದರಲ್ಲೂ ನಮ್ಮ ಕ್ಷೇತ್ರದಲ್ಲಿ ವಿಶೇಷವಾಗಿ ಅನೇಕ ರಾಜಕಾಲುವೆಗಳು ಒತ್ತುವರಿಯಾಗಿವೆ. ಹೋದ ಸಾರಿ ಮಳೆಗಾಲದಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಒಬ್ಬ ಕಾರ್ಮಿಕ ಸತ್ತ.

ಅಧ್ಯಕ್ಷರು : ಉತ್ತರ ಎಲ್ಲಿದೆ?

ಶ್ರೀ ಎಸ್. ಮುನಿರಾಜು : ಅಂದು ಜಿಲ್ಲಾ ಉಸ್ತುವಾರಿ ಸಚಿವರು ಬಂದು ಎರಡು ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡಿ ಹೋಗಿದ್ದರು, ಈ ಪರಿಹಾರ ಸಿಕ್ಕಿಲ್ಲ.

ಅಧ್ಯಕ್ಷರು : ನಿಮ್ಮ ಪ್ರಶ್ನೆಗೆ ಬನ್ನಿ.

ಶ್ರೀ ಎಸ್. ಮುನಿರಾಜು : ರಾಜಕಾಲುವೆ ಬಗ್ಗೆ ಪ್ರಶ್ನೆ ಕೇಳುತ್ತಿದ್ದೇನೆ. ಒತ್ತುವರಿ ತೆರವುಗೊಳಿಸುತ್ತಿದ್ದೇನೆಂದು ಹೇಳುತ್ತಿದ್ದಾರೆ. 40 ಕಿ.ಮೀ. ಉದ್ದ ಇರುವ ರಾಜಕಾಲುವೆಯಲ್ಲಿ ಅರ್ಧ ಕಿಲೋ ಮೀಟರ್ ಮಾತ್ರ ತೆರವುಗೊಳಿಸಿದ್ದಾರೆ.

ಅಧ್ಯಕ್ಷರು : ಪ್ರಶ್ನೆ ಕೇಳಿ.

ಶ್ರೀ ಎಸ್. ಮುನಿರಾಜು : ಅದನ್ನೇ ಕೇಳುತ್ತಿದ್ದೇನೆ.

ಅಧ್ಯಕ್ಷರು : ಅವರು ಕೊಟ್ಟ ಉತ್ತರದಲ್ಲಿ ಯಾವುದು ಸರಿಯಿಲ್ಲ? ನಿಮಗೆ ಯಾವುದು ಬೇಕೋ ಅದನ್ನು ನಿರ್ದಿಷ್ಟವಾಗಿ ಕೇಳಿ.

ಶ್ರೀ ಎಸ್. ಮುನಿರಾಜು : ಹಂತ ಹಂತವಾಗಿ ತೆರವುಗೊಳಿಸುತ್ತಿದ್ದೇನೆಂದು ಹೇಳುತ್ತಿದ್ದಾರೆ. ಅನೇಕ bottle neck ಗಳಿವೆ. ಮಳೆಗಾಲ ಬಂದಾಗ ಸಮಸ್ಯೆಗಳಾಗಿ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ. ಆದ್ದರಿಂದ ಎಲ್ಲೆಲ್ಲಿ bottle neck ಗಳಿವೆ. ಅವುಗಳನ್ನು ತೆರವುಗೊಳಿಸಬೇಕು, ಇದಕ್ಕೆ ಸರ್ವೇ ಕಾರ್ಯ ಆಗಬೇಕಾಗಿದೆ. BBMP ಯವರು ಕೆಲಸ ಮಾಡುತ್ತಿದ್ದಾರೆ. ಅವರು ಕಂದಾಯ ಇಲಾಖೆಗೆ ಸರ್ವೇಯರ್ಸ್ ಬೇಕು ಎಂದು ಪತ್ರ ಬರೆಯುತ್ತಾರೆ. ಮೂರು ವರ್ಷಗಳಿಂದ ನಿರಂತರವಾಗಿ ಪತ್ರ ಬರೆದಾಗಲೂ ಕೂಡ ಕಂದಾಯ ಇಲಾಖೆಯವರು ಸರ್ವೇಯರ್ಸ್ ಅನ್ನು ಕಳುಹಿಸಿಲ್ಲ. ಇದರಿಂದ ಅಡೆತಡೆಯಾಗುತ್ತಿದೆ. ಉತ್ತರದಲ್ಲಿ ಸರ್ವೇ ಕಾರ್ಯ ಮುಗಿದ ನಂತರ

ಹಂತ ಹಂತವಾಗಿ ತೆರವುಗೊಳಿಸುತ್ತೇನೆಂದು ಹೇಳುತ್ತಾರೆ. BBMP ಯವರ ಹತ್ತಿರ ಸರ್ವೇಯರ್ಸ್ ಇಲ್ಲ. ಅವರು ಕಂದಾಯ ಇಲಾಖೆಗೆ ಸರ್ವೇಯರ್ಸ್ ಕಳುಹಿಸಿ ಎಂದು ಪತ್ರ ಬರೆಯುತ್ತಾರೆ.

ಅಧ್ಯಕ್ಷರು : ಸರ್ವೇ ಯಾವಾಗ ಪೂರೈಸುತ್ತೀರಾ ಎಂದು ಕೇಳಿ.

ಶ್ರೀ ಎಸ್. ಮುನಿರಾಜು : ಮಾನ್ಯ ಅಧ್ಯಕ್ಷರೆ, ಸರ್ವೇ ಕಾರ್ಯ ಯಾವಾಗ ಮುಗಿಸುತ್ತೀರಾ ಎಂದು ನಿಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರ ಪ್ರಶ್ನೆ ಅರ್ಥವಾಯಿತು. ಅಲ್ಲಿ 41.65 ಕಿ.ಮೀ. ಉದ್ದದ ರಾಜಕಾಲುವೆ ಇದೆ. ಆ ರಾಜಕಾಲುವೆಯ ಒತ್ತುವರಿ ಕ್ಲಿಯರ್ ಮಾಡಬೇಕು ಎನ್ನುವುದು ಅವರ ಪ್ರಶ್ನೆ. ಅದನ್ನು ಕ್ಲಿಯರ್ ಮಾಡಿಕೊಡಬೇಕೆಂದು ಕೇಳಿದ್ದಾರೆ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 8 ವಾರ್ಡ್‌ಗಳಿವೆ. ವಾರ್ಡ್ ನಂಬರ್ 41 ನಲ್ಲಿ ಈಗಾಗಲೇ ಸುಮಾರು 2592 square metres ಕ್ಲಿಯರ್ ಮಾಡಿದ್ದಾಗಿದೆ. ಉಳಿದ 7 ವಾರ್ಡ್‌ಗಳಲ್ಲಿ Revenue Department ಜೊತೆಗೆ ಸರ್ವೇ ಕಾರ್ಯ ಮಾಡಬೇಕಾಗಿದೆ. ಅವರು ಹೇಳುವುದು ಏನೆಂದರೆ, BBMP ಯವರ ಹತ್ತಿರ ಸರ್ವೇಯರ್ಸ್ ಇರಲಿಲ್ಲ, Revenue Department ನಿಂದ ಸರ್ವೇಯರ್ಸ್ ತೆಗದುಕೊಳ್ಳಬೇಕಾಗಿತ್ತು ಎಂದು ಹೇಳಿದರು. ಈಗ ಸರ್ವೇಯರ್ಸ್ ಇದ್ದಾರೆ, ಸರ್ವೇ ಕಾರ್ಯ ನಡೆಯುತ್ತಿದೆ, ಆದಷ್ಟು ಜಾಗ್ರತೆ ಸರ್ವೇ ಕಾರ್ಯ ಮಾಡಿ ತೆರವುಗೊಳಿಸತಕ್ಕಂಥ ಕೆಲಸ ನಾವು ಮಾಡುತ್ತೇವೆ. ಅಲ್ಲಿ ನರ್ಮ್ ಯೋಜನೆಯಡಿಯಲ್ಲಿ 262 ಕೋಟಿ ರೂಪಾಯಿ ಕೆಲಸ ಮಂಜೂರಾಗಿದೆ. Corporation ನವರು ಇದನ್ನು ಎರಡು ವರ್ಷಗಳಲ್ಲಿ ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದಾರೆ. ಎರಡು ವರ್ಷಗಳಲ್ಲಿ ಮಾಡುವ ಪ್ರಯತ್ನ ನಾವು ಮಾಡುತ್ತೇವೆ. ಇದು ಸರ್ಕಾರದ ಉತ್ತರ.

ಶ್ರೀ ಆರ್. ಅಶೋಕ : ಈಗ ಮಳೆಗಾಲ ಪ್ರಾರಂಭವಾಗುತ್ತಿದೆ. ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಳೆದ ವರ್ಷವೂ ಕೂಡ ಮಳೆಗಾಲದಲ್ಲಿ ಆಟೋ ರಿಕ್ಷಾ ಕೊಚ್ಚಿಕೊಂಡು ಹೋಗುವುದು, ಕಾರುಗಳೆಲ್ಲ ರಾಜಕಾಲುವೆಗಳಲ್ಲಿ ಕೊಚ್ಚಿಕೊಂಡು ಹೋಗುತ್ತಿರುವುದು, ಇವೆಲ್ಲಾ ತಾವು ಕೂಡ ಗಮನಿಸುತ್ತಿದ್ದೀರಿ. ಇಂದು

BBMP ಗೆ ಆ ಶಕ್ತಿಯೇ ಇಲ್ಲ. ಅದರಿಂದ ಒಂದು taskforce ಮಾಡಿ, BBMP ತಹಸೀಲ್ದಾರ್, ಡಿಸಿ, ಸರ್ವೇಯರ್ಸ್. ಈ ನಾಲ್ಕು ಜನ ಸೇರಿದರೆ ಮಾತ್ರ ಇದನ್ನು ಮಾಡುವುದಕ್ಕಾಗುವುದು. ಇಲ್ಲಾಂದ್ರೆ BBMP ಯವರನ್ನು ಬಿಟ್ಟರೆ ದೇವರಾಣೆ ಅವರು 100% ಅವರು ಮಾಡುವುದಿಲ್ಲ. ಅವರಿಗೆ ಆ ಶಕ್ತಿಯೂ ಇಲ್ಲ, ಅವರು ಸರ್ವೇಯರ್ಸ್ ಮೇಲೆ ಮತ್ತು ಡಿಸಿ ಯವರ ಮೇಲೆ ಹೇಳುತ್ತಾರೆ. ದಯವಿಟ್ಟು ಅದಕ್ಕೆ ಒಂದು taskforce ಮಾಡಿದರೆ ಶಾಶ್ವತವಾಗಿ ಆಗುತ್ತದೆ. ಎರಡು ವರ್ಷಗಳಲ್ಲಾದರೂ ಆಗಲಿ ಶಾಶ್ವತವಾಗಿ ಆಗುತ್ತದೆ.

ಶ್ರೀ ಸಿದ್ದರಾಮಯ್ಯ : ಅಶೋಕರವರು ಅನುಭವದಿಂದ ಹೇಳುತ್ತಿದ್ದಾರೆ. ಅವರ ಅನುಭವ ಅವರ ಅಧಿಕಾರದಲ್ಲಿದ್ದಾಗ ಬಳಸಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು.

ಅಧ್ಯಕ್ಷರು : ಅವರು ಬೇಡ ಎಂದು ಹೇಳುತ್ತಿದ್ದಾರೆ ಬೇಡ ಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಏನು ಹೇಳುತ್ತೇನೆಂದರೆ, ಅವರು Corporater ಆಗಿ, ಶಾಸಕರಾಗಿ, ಮಂತ್ರಿಯಾಗಿ, Deputy Chief Minister ಎಲ್ಲಾ ಆಗಿದ್ದಾರೆ, ಅನುಭವ ಜಾಸ್ತಿ ಇದೆ.

ಶ್ರೀ ಆರ್. ಅಶೋಕ : Urban Development Minister ಆಗಿರಲಿಲ್ಲ. ನೀವು ಹೇಳಿದ ಹಾಗೆ Urban Development Minister ಆಗಿದ್ದರೆ ಅದನ್ನು ಮಾಡಿ ಬಿಡುತ್ತಿದ್ದೆ.

ಶ್ರೀ ಸಿದ್ದರಾಮಯ್ಯ : ಆಯಿತು ಬಿಡಿ, ಇವರು incharge minister. ಬೆಂಗಳೂರು ನಗರಕ್ಕೆ ಉಸ್ತುವಾರಿ ಸಚಿವರಾಗಿದ್ದೀರಿ ಅಲ್ಲವೆ?

Mr. SPEAKER : Whole and sole.

ಶ್ರೀ ಆರ್. ಅಶೋಕ : ಉಸ್ತುವಾರಿ ಸಚಿವರಾಗಿದ್ದರೆ ಅಧಿಕಾರ ಬರಲ್ಲ.

ಶ್ರೀ ಸಿದ್ದರಾಮಯ್ಯ : ಈ ತರಹ ತಪ್ಪಸಿಕೊಳ್ಳುವುದು ಬೇಡ.

ಶ್ರೀ ಆರ್. ಅಶೋಕ : ಈ ಸಮಸ್ಯೆ ಏನೆಂದರೆ, ಯಾರೇ ಮುಖ್ಯಮಂತ್ರಿಯಾಗಲಿ ಅವರು Urban Development Department ಅನ್ನು ಇಟ್ಟುಕೊಂಡು ಬಿಡುತ್ತಾರೆ.

ಯಾವ ಮಂತ್ರಿಗಳಿಗೂ ಕೊಡುವುದಿಲ್ಲ. ಅದೊಂದು ಸಮಸ್ಯೆ ಇದೆ. ಬೆಂಗಳೂರಿಗೆ ಒಂದು ಸೆಪರೇಟ್ ಮಂತ್ರಿ ಇದ್ದಿದ್ದರೆ ಏನಾದರೂ ಮಾಡಬಹುದಾಗಿತ್ತು.

ಶ್ರೀ ಸಿದ್ದರಾಮಯ್ಯ : ಉಸ್ತುವಾರಿ ಮಂತ್ರಿಗಳಾದ ನಮ್ಮ ರಾಮಲಿಂಗಾರೆಡ್ಡಿಯವರಿಗೆ ಎಲ್ಲಾ powers ನಾನು ಕೊಟ್ಟು ಬಿಟ್ಟಿದ್ದೇನೆ. ಪಾಪ ನಿಮಗೆ ಹಿಂದಿನವರು ಎಲ್ಲಾ powers ಕೊಡಲಿಲ್ಲವೆ?

ಶ್ರೀ ಆರ್. ಅಶೋಕ : ಪಾಪ ರಾಮಲಿಂಗಾ ರೆಡ್ಡಿಯವರು ಏನೂ ಮಾಡುವುದಕ್ಕಾಗುತ್ತಿಲ್ಲ. ಈಗ ಅವರು ಸುಮ್ಮನೆ ಕುಳಿತಿದ್ದಾರೆ. ಅವರಿಗೆ ಕಸದ ಸಮಸ್ಯೆಯ ಬಗ್ಗೆಯಾಗಲಿ ಮತ್ತೊಂದರ ಬಗ್ಗೆಯಾಗಲಿ ಏನೂ ಮಾಡುವುದಕ್ಕಾಗುತ್ತಿಲ್ಲ, ಸುಮ್ಮನೆ ಕುಳಿತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇಲ್ಲ ಅವರೇ ಎಲ್ಲಾ ಮಾಡುತ್ತಿದ್ದಾರೆ.

ಶ್ರೀ ಎಸ್. ಮುನಿರಾಜು : ಒಂದೇ ಒಂದು clarification ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇವರು ಮಾಡಿದ್ದರೆ ಈ ಪರಿಸ್ಥಿತಿಗಳೆಲ್ಲಾ ಉದ್ಭವಿಸುತ್ತಿರಲಿಲ್ಲ. ಅದೇನೇ ಇರಲಿ ಅಶೋಕರವರು ಹೇಳಿರತಕ್ಕಂತ ಸಲಹೆಯನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ.

ಅಧ್ಯಕ್ಷರು : OK ಮುಂದಿನ ಪ್ರಶ್ನೆ.

ಶ್ರೀ ಎಸ್. ಮುನಿರಾಜು : ಒಂದೇ ಒಂದು clarification ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ನೋಡಿ ನಿನ್ನೆನೂ ವೇಸ್ಟ್ ಆಯಿತು. Demands ಮೇಲೆ ಚರ್ಚೆ ಮಾಡಿಸಬೇಕು.

ಶ್ರೀ ಎಸ್. ಮುನಿರಾಜು : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಸಣ್ಣ clarification.

ಶ್ರೀ ಸಿದ್ದರಾಮಯ್ಯ : ಆಯಿತು ಕೇಳಿ.

ಶ್ರೀ ಎಸ್. ಮುನಿರಾಜು : 41ನೇ ವಾರ್ಡ್‌ನಲ್ಲಿ ತೆರವುಗೊಳಿಸಿದ್ದೇವೆಂದು ಹೇಳಿದರು. ಹೋದ ಸಾರಿ ಒಬ್ಬ ಮೃತನಾದ. ಆ ಪಾರ್ಟ್ ಮಾತ್ರ ಅಂದರೆ 200–300 ಮೀಟರ್ ಮಾತ್ರ ತೆರವುಗೊಳಿಸಿದ್ದಾರೆ. ಸಂಪೂರ್ಣ ತೆರವುಗೊಳಿಸಲಿಲ್ಲ. ಅದಕ್ಕೆ ಅದನ್ನೂ ಸೇರಿಸಿ ತೆರವುಗೊಳಿಸಬೇಕು.

ಶ್ರೀ ಸಿದ್ದರಾಮಯ್ಯ : ಯಾವ್ಯಾವುದು ತೆರವುಗೊಳಿಸಬೇಕು ಅದೆಲ್ಲವನ್ನೂ ತೆರವುಗೊಳಿಸುತ್ತೇವೆ.

ಅಧ್ಯಕ್ಷರು : ಆಯಿತು ಬಿಡಿ. ಟೈಂ ಆಯಿತು ಸಾಕು ಬಿಡಿ, ಹ್ಯಾರಿಸ್ ನೀವು ಕೇಳಿ.

ಕಸ ವಿಲೇವಾರಿ ವ್ಯವಸ್ಥೆ

18 (256) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸುವ್ಯವಸ್ಥಿತ ಶಾಶ್ವತ ಕಸ ವಿಲೇವಾರಿಗಾಗಿ ಕೈಗೊಂಡ ಕ್ರಮಗಳೇನು; ಪ್ರಸ್ತುತ ಇರುವ ತ್ಯಾಜ್ಯ ವಿಲೇವಾರಿ ಘಟಕಗಳು ಯಾವುವು;

(ಆ) ಕಸದ ಒಟ್ಟು ಪ್ರಮಾಣ ಮತ್ತು ಅವುಗಳನ್ನು ನಿರ್ವಹಿಸುವಲ್ಲಿ ಅನುಸರಿಸುತ್ತಿರುವ ವಿಧಾನಗಳೇನು; ದೇಶ ಮತ್ತು ವಿದೇಶಗಳಲ್ಲಿ ಕಸ ವಿಲೇವಾರಿಗೆ ಅನುಸರಿಸುತ್ತಿರುವ ಆಧುನಿಕ ವಿಧಾನಗಳನ್ನು ಬಳಕೆ ಮಾಡಿಕೊಳ್ಳಲು ಇರುವ ಸಮಸ್ಯೆಗಳೇನು;

(ಇ) ಕಸದಿಂದ ಜೈವಿಕ ಗೊಬ್ಬರ ಮತ್ತು ಇಂಧನ ಉತ್ಪಾದಿಸುವ ಕುರಿತು ಯಾವ ಕ್ರಮಗಳನ್ನು ಜರುಗಿಸಲಾಗಿದೆ; ನೂತನ ತಂತ್ರಜ್ಞಾನದ ಬಳಕೆಗಾಗಿ ರೂಪಿಸಿರುವ ಕ್ರಿಯಾ ಯೋಜನೆಗಳು ಯಾವುವು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ವೈಜ್ಞಾನಿಕ ಸಂಸ್ಕರಿಸಲು ಪಾಲಿಕೆಯ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.